# ಡಾ. ಜಿ.ಎಸ್. ಶಿವರುದ್ರಪ್ಪ

ಪ್ರೊ.ನಿಸಾರ್ ಅಹಮದ್ ಅವರ ನಂತರ ಸಾಹಿತ್ಯ ಅಕಾಡೆಮಿ ಸಾರಥ್ಯ ವಹಿಸಿಕೊಂಡವರು ಡಾ.ಜಿ.ಎಸ್. ಶಿವರುದ್ರಪ್ಪ.
೧೯೮೭ ರಿಂದ ೧೯೯೦ರವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ.ಜಿ.ಎಸ್.ಶಿವರುದ್ರಪ್ಪ ಅವರು ಆಧುನಿಕ ಕನ್ನಡದ ಪ್ರಸಿದ್ಧ ಕವಿ ವಿಮರ್ಶಕ ಹಾಗೂ ಚಿಂತನಶೀಲ ವಾಗ್ಮಿ.

ಜಿ.ಎಸ್.ಎಸ್. ೧೯೮೭ರಿಂದ ೧೯೯೦ರವರೆಗೆ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರೆಂಬುದು ಅಕಾಡೆಮಿಗೆ ಹೆಮ್ಮೆಯ ಸಂಗತಿ. ಜಿ.ಎಸ್.ಎಸ್. ಅವರು 'ಇತಿಹಾಸ ಮಾಲೆ'ಗಾಗಿ ನೀಡಿದ ಸಂದರ್ಶನದಲ್ಲಿ ತಮ್ಮ ಮೂರು ವರ್ಷಗಳ ಅವಧಿಯಲ್ಲಿ ಕೈಗೊಂಡ ಯೋಜನೆಗಳ ಬಗ್ಗೆ ತಿಳಿಸಿದರಲ್ಲದೆ, ಅಕಾಡೆಮಿಯ ವಾರ್ತಾಪತ್ರದ ೧೯೯೦ರ ಜುಲೈ ತಿಂಗಳ ಸಂಚಿಕೆಯಲ್ಲೂ ಈ ಅವಧಿಯ ಎಲ್ಲ ಕಾರ್ಯಕ್ರಮಗಳ ಬಗ್ಗೆ ದಾಖಲಿಸಲಾಗಿದೆ. ಅಕಾಡೆಮಿಯ ನಿಶ್ಚಿತ ಮತ್ತು ಆವರ್ತಕ ಸ್ವರೂಪದ ಕಾರ್ಯಕ್ರಮಗಳಲ್ಲದೆ ಜಿ.ಎಸ್.ಎಸ್ ಅಧ್ಯಕ್ಷತೆಯಲ್ಲಿ ನಿರ್ವಹಿಸಲಾದ ಕಾರ್ಯಗಳು ಹೀಗಿವೆ: ಮೊದಲನೆಯದಾಗಿ ಅಕಾಡೆಮಿಯ ಪ್ರತಿಯೊಂದು ಕಾರ್ಯಕ್ರಮಕ್ಕೆ ಹಾಗೂ ಅದರ ಖರ್ಚು – ವೆಚ್ಚಗಳಿಗಾಗಿ ನಿರ್ದಿಷ್ಟ ನಿಯಮಾವಳಿಗಳನ್ನು ಜಾರಿಗೆ ತರಲಾಯಿತು. ಇದರಿಂದಾಗಿ ಕಾರ್ಯಕ್ರಮ ನಿರ್ವಹಣೆಗೆ ಒಂದು ಚೌಕಟ್ಟು ದೊರೆಯಿತು. ಹಾಗೆಯೇ ಪುಸ್ತಕ ಬಹುಮಾನದ ನಿಯಮಾವಳಿಗಳನ್ನೂ ಪರಿಷ್ಕರಿಸಲಾಯಿತು. ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಮುದ್ರಣಾಲಯಗಳಿಗೆ ಗೊತ್ತುಮಾಡುವ ದರದಲ್ಲಿ ಏಕರೂಪತೆ ಇರುವಂತೆ ನಿಗದಿಗೊಳಿಸಿದ್ದು ಮತ್ತೊಂದು ಮುಖ್ಯ ನಿರ್ಧಾರ. ಅಕಾಡೆಮಿಯ ಪುಸ್ತಕ ಪ್ರಕಟಣಾ ಕಾರ್ಯದ ಜೊತೆಗೆ ಪುಸ್ತಕ ಮಾರಾಟವನ್ನು ತ್ವರಿತಗೊಳಿಸಿ, ಅದರಿಂದ ಬರುವ ಹಣವನ್ನು ಪುಸ್ತಕ ಪ್ರಕಟಣೆಗಳಿಗೆ ಬಳಸಿಕೊಳ್ಳುವ ಆವರ್ತಕ ನಿಧಿಯನ್ನಾಗಿ ಪರಿವರ್ತಿಸಿ ಅದರ ನಿರ್ವಹಣೆಗಾಗಿ ಪ್ರತ್ಯೇಕ ನಿಯಮಾವಳಿಗಳನ್ನು ರಚಿಸಲಾಯಿತು. ತುಳು ಭಾಷೆಯ ಕೃತಿ ಮತ್ತು ವಿನೋದ ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಯನ್ನು ಈ ಅವಧಿಯಲ್ಲಿ ಸೇರಿಸಲಾಯಿತು. ಇದರಿಂದಾಗಿ ಅಕಾಡೆಮಿ ಹದಿನೆಂಟು ಸಾಹಿತ್ಯ ಪ್ರಕಾರಗಳಿಗೆ ಉತ್ತೇಜನ ನೀಡಿದಂತಾಯಿತು. ಜಿ.ಎಸ್.ಎಸ್ ತಮ್ಮ ಸ್ವಂತ ಖರ್ಚಿನಲ್ಲಿ ೧೯೮೭ರ ಸೆಪ್ಟೆಂಬರ್‌ನಲ್ಲಿ ಅಮೆರಿಕ ಪ್ರವಾಸ ಕೈಗೊಂಡು ಅಲ್ಲಿನ ವಿವಿಧ ಕನ್ನಡ ಸಂಘಗಳ ಹಾಗೂ ಕನ್ನಡಿಗರ ಮನವೊಲಿಸಿ ಸಾಹಿತ್ಯ ಅಕಾಡೆಮಿಗಾಗಿ ೧೯೮೯ರ ವೇಳೆಗೆ ಬರ ಮಾಡಿಕೊಂಡ ೫೦ ಸಾವಿರ ರೂಗಳ ನಿಧಿಯನ್ನು ನಿಶ್ಚಿತ ಠೇವಣಿಯಲ್ಲಿರಿಸಿ ಅದರ ಬಡ್ಡಿಯಿಂದ ಅಮೆರಿಕ ಕನ್ನಡಿಗರ ಸಂಘಗಳ ವಿಶೇಷ ಬಹುಮಾನವೊಂದನ್ನು ನೀಡುವ ವ್ಯವಸ್ಥೆ ಮಾಡಲಾಯಿತು.

೧೯೮೭ರವರೆಗೂ ಸಾಹಿತ್ಯ ಅಕಾಡೆಮಿಯ ಅತ್ಯಂತ ಪ್ರತಿಷ್ಠಿತ ಕಾರ್ಯಕ್ರಮವಾದ ಪುಸ್ತಕ ಬಹುಮಾನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ಬೆಂಗಳೂರಿನಲ್ಲಿಯೇ ನಡೆಯುತ್ತಿತ್ತು. ಜಿ.ಎಸ್.ಎಸ್. ತಮ್ಮ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ರಾಜ್ಯದಲ್ಲಿ ಸಾಂಸ್ಕೃತಿಕ ಮಹತ್ವವುಳ್ಳ ಇತರ ನಗರಗಳಲ್ಲಿ ನಡೆಸಲು ನಿರ್ಧರಿಸಿದರು. ಹೀಗಾಗಿ ೧೯೮೭ ಡಿ. ೨೯ರಂದು ಮೈಸೂರು, ೧೯೮೮ ಡಿ.೩ರಂದು ಉಡುಪಿ ಮತ್ತು ೧೯೮೯ರ ನ. ೧೮ರಂದು ಧಾರವಾಡದಲ್ಲಿ ಈ ಸಮಾರಂಭಗಳನ್ನು ನಡೆಸಲಾಯಿತು. ಕೆ.ಎಸ್. ನರಸಿಂಹಸ್ವಾಮಿ, ಡಾ. ಕೆ.ಶಿವರಾಮ ಕಾರಂತ, ಪ್ರೊ. ಎ.ಎನ್.ಮೂರ್ತಿರಾವ್ ಈ ಹಿರಿಯ ಕವಿ ಸಾಹಿತಿಗಳು ಅನುಕ್ರಮವಾಗಿ ಈ ಪ್ರಶಸ್ತಿಗಳನ್ನು ವಿತರಿಸಿದರು. ಕೇರಳದ ಪ್ರಸಿದ್ಧ ಲೇಖಕ ಡಾ.ಅಯ್ಯಪ್ಪಪಣಿಕ್ಕರ್, ಕೊಂಕಣಿ ಸಾಹಿತಿ ಡಾ. ಮನೋಹರ ಸರ್‌ದೇಸಾಯಿ, ಮರಾಠಿಯ ಪ್ರಮುಖ ಲೇಖಕ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಉಪಾಧ್ಯಕ್ಷರಾಗಿದ್ದ ಡಾ. ಗಂಗಾಧರ ಗಾಡ್ಗೀಳ್ ಅವರು ಮುಖ್ಯ ಅತಿಥಿಗಳಾಗಿ ಈ ಸಮಾರಂಭಗಳಿಗೆ ಆಗಮಿಸಿ ಕಳೆ ತಂದರು.

ಯುವ ಕವಿ ಸಮ್ಮೇಳನ ಈ ಅವಧಿಯ ಮತ್ತೊಂದು ಪ್ರಮುಖ ಕಾರ್ಯಕ್ರಮ. ಆಯ್ಕೆಯಾದ ಯುವ ಕವಿಗಳಿಗಾಗಿ ಮೊದಲ ಸಮ್ಮೇಳನವನ್ನು ೧೯೮೮ ಫೆ. ೨೫ರಂದು ಕುವೆಂಪು ಅವರಿಗೆ ೮೩ ವರ್ಷ ತುಂಬಿದ ನೆನಪಿಗಾಗಿ ಶಿವಮೊಗ್ಗದಲ್ಲಿ ಮತ್ತು ೧೯೮೯ ಜ. ೩೧ರಂದು ವರಕವಿ ದ.ರಾ.ಬೇಂದ್ರೆ ಅವರ ನೆನಪಿಗಾಗಿ ಧಾರವಾಡದಲ್ಲಿ ೨ನೆಯ ಯುವ ಕವಿ ಸಮ್ಮೇಳನವನ್ನು ನಡೆಸಲಾಯಿತು. ಯುವ ಕವಿಗಳಾದ ಸವಿತಾ ನಾಗಭೂಷಣ ಹಾಗೂ ಬಸವರಾಜ ವಕ್ಕುಂದ ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದಲ್ಲಿ ವಾಚನಗೊಂಡ ಕವನಗಳನ್ನು 'ಯುವ ಕಾವ್ಯ –೧' ಮತ್ತು ಯುವ ಕಾವ್ಯ – ೨' ಹೆಸರಿನ ಸಂಕಲನಗಳಲ್ಲಿ ಅಕಾಡೆಮಿ ಪ್ರಕಟಿಸಿತು.

ಡಾ. ಜಿ.ಎಸ್.ಎಸ್. ಅವರ ಅಧ್ಯಕ್ಷತೆಯ ಅವಧಿಯಲ್ಲಿ ಮೌಲಿಕವಾದ ಕೆಲಸಮಾಡುತ್ತಿರುವ ಕಿರುಪತ್ರಿಕೆಗಳನ್ನು ಪ್ರೋತ್ಸಾಹಿಸುವ ಧನಸಹಾಯ ಯೋಜನೆಯನ್ನು ಪ್ರಾರಂಭಿಸಲಾಯಿತು. ಅಂಕಣ, ಸಂವಾದ ರುಜುವಾತು, ಗ್ರಂಥ ಲೋಕ, ಶೂದ್ರ, ಸಂಕ್ರಮಣ, ಪರಿಚಯ, ಲೇಖಕಿ, ಸೃಜನದೇವಿ, ಅಚಲ ಅನ್ವೇಷಣೆ, ಲೇಖಕ, ಕವಿಮಾರ್ಗ ಈ ಪತ್ರಿಕೆಗಳಿಗೆ ಜಾಹೀರಾತಿನ ಮೂಲಕ ಆರ್ಥಿಕ ನೆರವು ನೀಡಲಾಯಿತು. ಖಾಸಗಿ ಪ್ರಸಾರಕ್ಕಾಗಿ ಪ್ರಕಟವಾಗುತ್ತಿದ್ದ 'ಚಂದನ' ಎಂಬ ಹೆಸರಿನ ಇಂಗ್ಲಿಷ್ ಮತ್ತು ಕನ್ನಡ ತ್ರೈಮಾಸಿಕಗಳಿಗೆ ದೆಹಲಿಯ ನೋಂದಾವಣೆ ಕಚೇರಿಯಿಂದ ಪರವಾನಗಿ ಪಡೆದು 'ಅನಿಕೇತನ' ಎಂಬ ಹೆಸರಿನ ಅಧಿಕೃತ ನಿಯತಕಾಲಿಕೆಯನ್ನಾಗಿ ಮಾಡಲಾಯಿತು. ಕನ್ನಡೇತರ ಹಾಗೂ ಜಾಗತಿಕ ಸಾಹಿತ್ಯದ ಪರಿಚಯವನ್ನು ಕನ್ನಡಿಗರಿಗೆ ಅನುವಾದಗಳ ಮೂಲಕ ಮಾಡಿಕೊಡುವ ಉದ್ದೇಶ ಹೊಂದಿದ್ದ ಈ ಪತ್ರಿಕೆ ಹೆಚ್ಚಿನ ಸಂಖ್ಯೆಯ ಚಂದಾದಾರರನ್ನು ಹೊಂದಿದೆ. ಅಕಾಡೆಮಿಯ ಮುಖವಾಣಿಯಾಗಿ ೧೯೮೭ರ ಜನವರಿಯಿಂದ ದ್ವೈಮಾಸಿಕ ವಾರ್ತಾ ಪತ್ರವನ್ನು ಪ್ರಕಟಿಸುವ ಕಾರ್ಯವೂ ಇವರ ಅವಧಿಯದೇ.

ಸಾಹಿತ್ಯ ಅಕಾಡೆಮಿಯು ೧೯೮೬ರಲ್ಲೇ ಬೆಳ್ಳಿ ಹಬ್ಬವನ್ನು ಆಚರಿಸಬೇಕಿತ್ತಾದರೂ ಕಾರಣಾಂತರಗಳಿಂದ ಅದು ಕೈಗೂಡಿರಲಿಲ್ಲ. ಡಾ.ಜಿ.ಎಸ್.ಎಸ್. ಅವಧಿಯಲ್ಲಿ ಈ ಕಾರ್ಯವನ್ನು ಕೈಗೊಂಡು ಅದರ ಅಂಗವಾಗಿ ಭಾರತೀಯ ಸಾಹಿತ್ಯ ಸಮೀಕ್ಷೆ ಹಾಗೂ ಸಾಹಿತ್ಯ ಪಾರಿಭಾಷಿಕಗಳ ಪ್ರಕಟಣೆಯ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. 'ಸಾಹಿತ್ಯ ವಿಮರ್ಶೆಯ ಪಾರಿಭಾಷಿಕ'ಗಳನ್ನು ಕುರಿತು ೨೫ ಕಿರುಪುಸ್ತಕಗಳನ್ನು ಪ್ರಕಟಿಸಬೇಕೆಂದೂ ಇಂಗ್ಲೀಷ್ ಭಾಷೆಯಲ್ಲಿ ಡಾ. ಕೆ.ಎಂ. ಜಾರ್ಜ್ ಸಿದ್ಧಪಡಿಸಿ ಕೇರಳ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಕಂಪ್ಯಾರೆಟಿವ್ ಇಂಡಿಯನ್ ಲಿಟರೇಚರ್' ಸಂಪುಟಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲು ಅಕಾಡೆಮಿ ತೀರ್ಮಾನಿಸಿತು. ಗಿರಡ್ಡಿ ಗೋವಿಂದರಾಜ ಸಂಪಾದಕತ್ವದಲ್ಲಿ ಸಾಹಿತ್ಯ ಪಾರಿಭಾಷಿಕ ಮಾಲೆಯ ಹತ್ತು ಕೃತಿಗಳು ಪ್ರಕಟವಾದವು. ಪ್ರೊ. ಎಲ್.ಎಸ್.ಶೇಷಗಿರಿರಾಯರ ಸಂಪಾದಕತ್ವದಲ್ಲಿ ನೂರಕ್ಕೂ ಮೀರಿದ ಅನುವಾದಕರ ನೆರವಿನಿಂದ 'ಕಂಪ್ಯಾರೆಟಿವ್ ಇಂಡಿಯನ್ ಲಿಟರೇಚರ್'ನ ಎರಡು ಬೃಹತ್ ಸಂಪುಟಗಳು 'ಭಾರತೀಯ ಸಾಹಿತ್ಯ ಸಮೀಕ್ಷೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡು ೧೯೯೦ರ ಮಾರ್ಚ್ ೨ ರಂದು ಡಾ.ಕೆ.ಶಿವರಾಮ ಕಾರಂತರಿಂದ ಬಿಡುಗಡೆಯಾಯಿತು. ಕರ್ನಾಟಕ ಸರ್ಕಾರ ಮತ್ತು ಭಾರತ ಸಕಾರದ ಶಿಕ್ಷಣ ಸಚಿವಾಲಯ ಈ ಸಂಪುಟಗಳ ಮುದ್ರಣ ಕಾರ್ಯಕ್ಕೆ ಆರ್ಥಿಕ ನೆರವು ನೀಡಿದವು. ಈ ಕೃತಿಗೆ ಪೂರಕವಾಗುವಂತೆ ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಅರವತ್ತೇಳು ಸಾಹಿತಿಗಳು ಮೂಲಮಾನದಲ್ಲಿ ಕಟ್ಟಿಕೊಡುವ ಪ್ರಯತ್ನವಾಗಿ 'ಸಾಲು ದೀಪಗಳು' ಎಂಬ ಸಂಪುಟದ ಪ್ರಕಟಣೆಯೂ ಆಯಿತು.

ಅಕಾಡೆಮಿಯ ಮೊದಲ ಎರಡೂವರೆ ದಶಕಗಳಲ್ಲಿ ಪ್ರಕಟಗೊಂಡ ಕೃತಿಗಳ ಸಂಖ್ಯೆ ಮೂವತ್ತು. ಡಾ.ಜಿ.ಎಸ್.ಎಸ್. ರ ಮೂರು ವರ್ಷಗಳ ಅವಧಿಯಲ್ಲಿ ಐವತ್ಮೂರು ಕೃತಿಗಳು ಹೊರಬಂದವು. ಈ ಮೇಲೆ

ತಿಳಿಸಿದ ಕೃತಿಗಳಷ್ಟೇ ಅಲ್ಲದೆ ಪ್ರವಾಸ ಅನುದಾನ ಮಾಲೆಯ ಪುಸ್ತಕಗಳು, ವಾರ್ಷಿಕ ಸಂಕಲನಗಳು ಹಾಗೂ ಈ ಮೂರು ವರ್ಷಗಳ ಅವಧಿಯಲ್ಲಿ ಅಕಾಡೆಮಿ ಏರ್ಪಡಿಸಿದ ವಿಚಾರ ಸಂಕಿರಣಗಳು ಹಾಗೂ ಕಮ್ಮಟಗಳಲ್ಲಿ ಮಂಡಿಸಿದ ಪ್ರಬಂಧಗಳು ಸಂಕಲನಗಳಾಗಿ ಹೊರಬಂದವು. ಸಾಹಿತ್ಯಕ ಸಾಂಸ್ಕೃತಿಕ ಪ್ರವಾಸ ಅನುದಾನ ಯೋಜನೆಯಲ್ಲಿ ಪ್ರವಾಸ ಮಾಡಿ ಬಂದವರು ಒಂದು ವರದಿಯನ್ನು ನೀಡಿದರೆ ಸಾಕಾಗಿತ್ತು. ಆದರೆ ಈ ಅವಧಿಯಲ್ಲಿ ಹಾಗೆ ಪ್ರವಾಸ ಕೈಗೊಂಡವರು ನೂರು ಪುಟಗಳಿಗೆ ಕಡಿಮೆಯಿಲ್ಲದೆ ಸೃಜನಾತ್ಮಕ ರೂಪದ ಬರಹವೊಂದನ್ನು ಅಕಾಡೆಮಿಗೆ ಒಪ್ಪಿಸಬೇಕೆಂಬ ನಿಯಮವನ್ನು ವಿಧಿಸಿತು. ಇದರಿಂದಾಗಿ ಐದು ಪ್ರವಾಸ ಕಥನಗಳನ್ನು ಅಕಾಡೆಮಿ ಹೊರತರಲು ಸಾಧ್ಯವಾಯಿತು. ಈ ಮೂರು ವರ್ಷಗಳ ಅವಧಿಯಲ್ಲಿ ಅಕಾಡೆಮಿಯು ಬೀದರ್, ರಾಯಚೂರು ಹಾಗೂ ಬಳ್ಳಾರಿಯಲ್ಲಿ ಒಂದೊಂದು ಕಮ್ಮಟವನ್ನು ನೇರವಾಗಿ ಹತ್ತೊಂಬತ್ತು ಹಾಗೂ ಇತರ ಸಂಘ ಸಂಸ್ಥೆಗಳೊಂದಿಗೆ ಸೇರಿ ಇಪ್ಪತ್ತಾರು ವಿಚಾರ ಸಂಕಿರಣಗಳನ್ನು, ಮೂರು ಪ್ರಶಸ್ತಿ ಪ್ರದಾನ ಸಮಾರಂಭಗಳನ್ನು, ಮೂರು ಪುಸ್ತಕ ಬಿಡುಗಡೆ ಕಾರ್ಯಕ್ರಮಗಳನ್ನು, ಎರಡು ಯುವ ಕವಿ ಸಮ್ಮೇಳನಗಳನ್ನು ನಡೆಸಿದೆ. ಈ ಕಾರ್ಯಕ್ರಮಗಳು ರಾಜ್ಯದ ವಿವಿಧೆಡೆಗಳಲ್ಲಿ ನಡೆಯಿತೆಂಬುದು ಗಮನಾರ್ಯ ಸಂಗತಿ.

ಹೀಗೆ ಡಾ. ಜಿ.ಎಸ್.ಎಸ್. ರವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಮೂರು ವರ್ಷಗಳ ಕಾಲ ಸೃಜನಾತ್ಮಕ ಯೋಜನೆಗಳನ್ನು ರೂಪಿಸುವ ಮೂಲಕ ಸ್ಮರಣೀಯರಾದರು.